**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಖಾನಾಪೂರ.**

**ಸಿ.ಸಿ ನಂ: 1756/2017**

ಪಿ.ಡಬ್ಲ್ಯೂ - 3

ಸಿ.ಡಬ್ಲ್ಯೂ - 7

ಹೆಸರು : ಮಡಿವಾಳಪ್ಪಾ ಫಕೀರಪ್ಪಾ ಇಂಗಳಗಿ

ವಯಸ್ಸು : 62 ವರ್ಷ

ಉದ್ಯೋಗ : ನಿವೃತ್ತ ಮುಖ್ಯ ಪೇದೆ

ವಾಸ : ಬೈಲಹೊಂಗಲ

ದಿನಾಂಕ 28-10-2025 ರಂದು ಸಾಕ್ಷಿಗೆ ಪ್ರಮಾಣ ಬೋಧಿಸಲಾಯಿತು.

ಮುಖ್ಯ ವಿಚಾರಣೆ : ಸಸಅ ರವರಿಂದ

ನಾನು 2016 ರಿಂದ 2021 ರವರೆಗೆ ಖಾನಾಪೂರ ಪೊಲೀಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕೆಲಸ ನಿರ್ವಹಿಸುತ್ತಿದ್ದೆ.

ದಿಃ 27.04.2017 ರಂದು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ 1 ರವರು ನಿಪಿ-1 ರಂತೆ ದೂರನ್ನು ನೀಡಿರುತ್ತಾರೆ. ಸದರಿ ಪಿರ್ಯಾದಿಯನ್ನು ಅಪರಾಧ ಸಂಖ್ಯೆ 215/2017 ರಡಿಯಲ್ಲಿ ಪ್ರವವಯನ್ನು ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರವವಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತದೆ. ಪ್ರವವಯನ್ನು ನಿಪಿ-2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ದೂರಿನಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿಪಿ-1(ಬಿ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ನಾನು ಅಪರಾಧ ನಡೆದ ಸ್ಥಳದಲ್ಲಿ ಚಾಸಾ 1 ರವರು ತೋರಿಸಿದಂತೆ 16.45 ರಿಂದ 17.45 ಗಂಟೆವರೆಗೆ ಚಾಸಾ 2 ಮತ್ತು 3 ರವರ ಸಮಕ್ಷಮ ಪಂಚನಾಮೆ ಮಾಡಿದ್ದು ಇರುತ್ತದೆ.

ಪಂಚನಾಮೆಯನ್ನು ನಿಪಿ-3 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಅದೇ ದಿನ ನಾನು ಫಿರ್ಯಾದಿಯ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ 4 ರಿಂದ 6 ರವರ ಹೇಳಿಕೆ ಪಡೆದುಕೊಂಡಿರುತ್ತೇನೆ. ನಂತರ ಅದೇ ದಿವಸ ಪಿಡಿಓ ಗ್ರಾಮ ಪಂಚಾಯತ ಬೈಲೂರ ಇವರಿಗೆ ಅರ್ಜಿ ನೀಡಿ ಸದರಿ ಘಟನಾ ಜಾಗೆಯ ಉತಾರವನ್ನು ಪಡೆದುಕೊಂಡಿರುತ್ತದೆ. ಆರೋಪಿತರ ವಿರುದ್ಧ ಸೂಕ್ತ ಸಾಕ್ಷ್ಯಾಧಾರಗಳು ದೊರೆತರಿಂದ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ. ಜಿ ಎಂ ಡಿ ವಕೀಲರಿಂದಃ**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವಂತೆ ಚಾಸಾ 1 ದೂರನ್ನು ನೀಡಿರುವುದಿಲ್ಲ, ನಾನು ಯಾವುದೇ ಪಂಚನಾಮಯನ್ನು ಮಾಡಿರುವುದಿಲ್ಲ, ಯಾವುದೇ ಸಾಕ್ಷಿದಾರರ ಹೇಳಿಕೆಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ . ನಾನು ಯಾವುದೇ ಜಾಗೆಯ ಉತಾರವನ್ನು ಪಡೆದುಕೊಂಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ . ಗ್ರಾಮ ಪಂಚಾಯತ ಬೈಲೂರ ಇವರಿಗೆ ಯಾವುದೇ ಮನವಿ ನೀಡಿಲ್ಲ ಎಂದು ಸೂಚಿಸಿದರೆ ಸರಿಯಲ್ಲ . ಆರೋಪಿತರು ಯಾವುದೇ ತಪ್ಪು ಮಾಡದೇ ಇದ್ದರೂ ಸಹಿತ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೋಷಾರೋಪಣೆ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದು ಸೂಚಿಸಿದರೆ ಸರಿಯಲ್ಲ .

ಮರುವಿಚಾರಣೆಃ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.